ಕರ್ನಾಟಕ ವಿಧಾನಸಭೆ

ಶುಕ್ರವಾರ 4ನೇ ಫೆಬ್ರವರಿ 2005ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 11 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ವರದಿಗಳನ್ನೊಪ್ಪಿಸುವುದು

ಶ್ರೀ ಎನ್.ಎಸ್.ಬೋಸರಾಜ್ (ಮಾನ್ವಿ):– ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರುಗಳ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಮೂರನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು.

2. ಸಭೆಯ ಮುಂದಿಡಲಾದ ಕಾಗದ ಪತ್ರಗಳು.

I ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ, 1992ರ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಅಧಿನಿಯಮ 9(3)ರ ಪ್ರಕರಣದ ಮೇರೆಗೆ:

ಕೋಮು ಗಲಭೆಗಳಲ್ಲಿ ನಿಧನಗೊಂಡವರಿಗೆ ಸಮಾನವಾದ ಪರಿಹಾರ ನೀಡುವಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದವರು ಶಿಫಾರಸ್ಸು ಮಾಡಿರುವ ಬಗ್ಗೆ ದಿನಾಂಕ 09.02.2004ರಂದು ಹೊರಡಿಸಲಾದ ಹೆಚ್‌ಡಿ:70ಸಿಆರ್‌ಆರ್:2000ರ ನಿವೇದನಾ ಪತ್ರ(ಮೆಮೊರೆಂಡಮ್)ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

II ಶ್ರೀ ಸಿದ್ಧರಾಮಯ್ಯ(ಉಪ ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, 1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ 39ರ ಪ್ರಕರಣದ ಮೇರೆಗೆ:–

ಮೀನುಗಾರಿಕಾ ಚಟುವಟಿಕೆಗಾಗಿ ಮೀನುಗಾರಿಗೆ ಮಾರಾಟ ಮಾಡುವ ಡೀಸೆಲ್ ಮೇಲೆ ಪಾವತಿಸಬೇಕಾದ ಮಾರಾಟ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 16.04.2004ರಂದು ಹೊರಡಿಸಲಾದ ಎಫ್‌ಡಿ:29:ಸಿಎಸ್‌ಎಲ್:2004ನೇ ಸಂಖ್ಯೆಯ ಅಧಿಸೂಚನೆ, ಮತ್ತು

2004ರ ಕರ್ನಾಟಕ ವಿಶೇಷ ಪ್ರವೇಶ ತೆರಿಗೆ ಕಾಯ್ದೆ 15(3)ರ ಪ್ರಕರಣದ ಮೇರೆಗೆ:–

ಯಶಸ್ವಿನಿ ಆರೋಗ್ಯ ಯೋಜನೆಯಡಿ ಹೊರ ರಾಜ್ಯದಿಂದ ನಾರಾಯಣ ಹೃದಯಾಲಯ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಕ್ ಸೈನ್ಸ್ ಅವರು ಆಮದು ಮಾಡಿಕೊಳ್ಳುವ ಎಮ್.ಆರ್.ಐ. ಸ್ಕ್ಯಾನರಿಗೆ ಪಾವತಿಸಬೇಕಾದ ವಿಶೇಷ ಪ್ರವೇಶ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಷರತ್ತಿಗೊಳಪಡಿಸಿ ವಿನಾಯಿತಿ ನೀಡಿ ದಿನಾಂಕ 15.01.2005ರಂದು ಹೊರಡಿಸಲಾದ ಎಫ್‌ಡಿ:167:ಸಿಇಟಿ:2004ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

III. **ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು)(ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಣ್ಣ ಕೈಗಾರಿಕೆ ಸಚಿವರ ಪರವಾಗಿ)**

2002ರ ಕರ್ನಾಟಕ ಕೈಗಾರಿಕೆಗಳ(ಸೌಲಭ್ಯ) ಅಧಿನಿಯಮ 21(2)ರ ಪ್ರಕರಣದ ಮೇರೆಗೆ:–

2003ರ ಕರ್ನಾಟಕ ಕೈಗಾರಿಕೆಗಳ(ಸೌಲಭ್ಯ) ನಿಯಮಗಳನ್ನು ರಚಿಸಿ ದಿನಾಂಕ 04.08.2004 ರಂದು ಹೊರಡಿಸಲಾದ ಸಿಐ:208:ಎಸ್‌ಪಿಐ:2002ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಕಾಗದ ಪತ್ರಗಳನ್ನು ಮಂಡಿಸಲಾಯಿತು.

3. ಶಾಸನ ರಚನೆ

6) ವಿಧೇಯಕದ ಪರ್ಯಾಲೋಚನೆ ಮತ್ತು ಅಂಗೀಕಾರ

ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2005

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು):– ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾಪವನ್ನು ಮಂಡಿಸಲಾಯಿತು(ಅನುಬಂಧ–1)

ಈ ಭಾಷಣವು ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಪರಿಷ್ಕರಿಸಲ್ಪಟ್ಟಿರುತ್ತದೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ಕ್ಕೆ ರಾಷ್ಟ್ರಪತಿಗಳ ಅಂಕಿತ ದೊರೆತ ಮೇಲೆ ಅಫೀಶಿಯಲ್ ಗೆಜೆಟ್‌ನಲ್ಲಿ ಪ್ರಕಟ ಮಾಡಿದ್ದೇವೆ. ಇವೆಲ್ಲಾ ಅಂಕಿತ ಸಿಕ್ಕಿದ ಮೇಲೆ, ರಾಷ್ಟ್ರದಲ್ಲಿ ತೆರಿಗೆ ಪದ್ಧತಿಯನ್ನು ಸುಧಾರಣೆ ಮಾಡುವುದಕೋಸ್ಕರವಾಗಿ ಹೊಸ ವ್ಯಾಟ್ ಪದ್ಧತಿಗೆ ಹೋಗುತ್ತಿದ್ದೇವೆ. ಇಲ್ಲಿಯವರೆಗೆ ನಾವು ಮಾರಾಟ ತೆರಿಗೆ ಪದ್ಧತಿಯನ್ನು ಅನುಸರಿಸಿಕೊಂಡು ತೆರಿಗೆ ವಸೂಲಿ ಮಾಡುವ ಕೆಲಸ ಮಾಡುತ್ತಿದ್ದೆವು. ಮಾರಾಟ ತೆರಿಗೆ ಪದ್ಧತಿಯಿಂದ Value Added Tax ಪದ್ಧತಿಗೆ ಹೋಗಬೇಕೆಂದು ಅನೇಕ ವರ್ಷಗಳಿಂದ ರಾಷ್ಟ್ರಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ. ಈ ಚರ್ಚೆ ನಡೆದು ಇದಕ್ಕೆ ಒಂದು ರೂಪ ಕೊಡುವುದಕೋಸ್ಕರವಾಗಿ ಅದನ್ನು ಜಾರಿ ಮಾಡಲು ಏನೆಲ್ಲಾ ಕ್ರಮಗಳನ್ನು ಅನುಸರಿಸಬೇಕು, ಇದಕ್ಕೆ ಎಲ್ಲಾ ರಾಜ್ಯಗಳು ಒಪ್ಪಿಗೆ ಕೊಟ್ಟರೆ ಏಕ ರೂಪದ ತೆರಿಗೆ ಪದ್ಧತಿಯನ್ನು ತರಲು ಸಾಧ್ಯವಾಗುತ್ತದೆ ಎನ್ನುವುದಕೋಸ್ಕರ ರಾಷ್ಟ್ರಮಟ್ಟದಲ್ಲಿ ಒಂದು ಎಂಪವರ್ಡ್ ಕಮಿಟಿ ರಚನೆಯಾಯಿತು. ರಾಜ್ಯಗಳ ಹಣಕಾಸು ಸಚಿವರುಗಳು ಅದರ ಸದಸ್ಯರುಗಳು. ಕರ್ನಾಟಕದವರೂ ಅದರಲ್ಲಿ ಒಬ್ಬ ಸದಸ್ಯರಾಗಿದ್ದಾರೆ. ಈ ಕಮಿಟಿಗೆ ಪಶ್ಚಿಮಬಂಗಾಳದ ಹಣಕಾಸು ಸಚಿವರಾದ ಅಶೀಮ್‌ದಾಸ್‌ಗುಪ್ತಾ ರವರು ಅಧ್ಯಕ್ಷರು. ಇದರ ಬಗ್ಗೆ ಬಹಳ ಡೆಲಿಬರೇಷನ್ಸ್ ಆಗಿವೆ. ಏಕೆಂದರೆ ಮಾರಾಟ ತೆರಿಗೆ ಪದ್ಧತಿಯೇನಿದೆ ಅದು ರಾಜ್ಯ ಸರ್ಕಾರಗಳಿಗೆ ಸೇರುತ್ತದೆ. ಸ್ಟೇಟ್ ಲಿಸ್ಟ್‌ನಲ್ಲಿ ಬರತಕ್ಕದ್ದು. ಕೇಂದ್ರ ಸರ್ಕಾರಕ್ಕೆ ರಾಜ್ಯಗಳು ಹೀಗೇ ತೆರಿಗೆ ವಸೂಲಿ ಮಾಡಬೇಕು ಎಂದು ಹೇಳಲು ಯಾವುದೇ ಅಧಿಕಾರ ಇಲ್ಲ. ಅದಕ್ಕೋಸ್ಕರವಾಗಿ ಎಲ್ಲಾ ರಾಜ್ಯಗಳೂ ಒಪ್ಪಿಗೆಯಾಗತಕ್ಕ ಒಮ್ಮತದ ಅಭಿಪ್ರಾಯಕ್ಕೆ ಬರತಕ್ಕ ಕೆಲಸವಾಗಬೇಕಾಗುತ್ತದೆ, ಅದಕ್ಕೋಸ್ಕರ ಎಂಪವರ್ ಕಮಿಟಿ ರಚನೆಯಾದದ್ದು. ಈ ಸಮಿತಿ ರಚನೆ ಆದಮೇಲೆ ಬಹಳಷ್ಟು